ಕಳೆದಿರಬಹುದು. ಫೋನ್ ನಲ್ಲಿ ನೋಟಿಫಿಕೇಶನ್ ತುಂಬಿಕೊಳ್ಳತೊಡಗಿತು. ಫೋನನ್ನೊಮ್ಮೆ ಎತ್ತಿಕೊಂಡ ಐದು ನಿಮಿಷದಲ್ಲಿ ಬರೋಬ್ಬರಿ ನೂರೈವತ್ತು ಲೈಕ್‌ಗಳು, ಇಪ್ಪತ್ತೈದು ಶೇರ್! ಅಬ್ಬಾ... ಅವನು ಕಮೆಂಟುಗಳನ್ನ ಓದತೊಡಗಿದ. ನಾಡಿನ ಪ್ರಖ್ಯಾತ ಬರಹಗಾರರೆನಿಸಿದ ಹೆಚ್ಚಿನವರು 'ನಾವು ಮೊದಲು ಸೇದಿದ ಸ್ಥಳ' ಎಂದು ಬಹಳ ಖಿನ್ನರಾಗಿಯೇ ಬರೆದುಕೊಂಡಿದ್ದರು. ಅದೆಷ್ಟು ಜನ ವಿಮರ್ಶಕರು, ಕಥೆಗಾರರು, ಕವಿಗಳು, ನಟರು... ಒಂದೇ ಪೋಸ್ಟಿಗೆ ಜನ್ನತ್ ಒಂದೇ ದಿನದಲ್ಲಿ ಸೆಲೆಬ್ರಿಟಿಯಾಗಿ ಬಿಟ್ಟ. ಅರ್ಧ ಗಂಟೆ ಕಳೆದಿರಬೇಕು. ಏನೋ ಹೊಳೆದಂತಾಗಿ, ದೇವಪ್ಪನಿಗೆ ಏನಾದರೂ ಸಹಾಯ ಮಾಡೋಣವೇ? ಎಂದು ಕಮೆಂಟೊಂದು ಸೇರಿಸಿಕೊಂಡ. ಹಾಗೆಯೇ ಫೋನಿಟ್ಟು ಮುಂದಿನ ಫಲಿತಾಂಶಕ್ಕಾಗಿ ಕಾದ. ಐದು ನಿಮಿಷಗಳ ತರುವಾಯ ಹತ್ತಾರು ಮಂದಿ 'G pay or Bank account No. Please' ಅಂತ ಹಾಕಿಕೊಂಡಿದ್ದರು. ಎರಡನ್ನೂ ನೀಟಾಗಿ ಪರಿಶೀಲಿಸಿಕೊಂಡು ಬರೆದು ಹಾಕಿದ. ನಿಮಿಷಗಳಲ್ಲಿ ಸಣ್ಣ ಸಣ್ಣ ಮೊತ್ತ ಜನ್ನತ್ ನ ಅಕೌಂಟಿನಲ್ಲಿ ತುಂಬತೊಡಗಿತು. ಎಲ್ಲರೂ ಸೇದುವವರೇ! ಸೇದುವವರಿಗೆ ಯಾವ ಧರ್ಮ, ಜಾತಿ, ಪಂಗಡ, ಪಕ್ಷ... ಅಬ್ಬಾ, ನೈಜ ಕುಟುಂಬವೇ ಎಂದನಿಸಿತವನಿಗೆ. ಯಾವುದೋ ನಿರಾಳ ಭಾವ ಆವರಿಸಿ ಜನ್ನತ್ ಅಲ್ಲಿಂದೆದ್ದು ರೂಮಿಗೆ ಹೊರಟ.

* * *

ಮಾರನೇ ದಿನಕ್ಕೆ ಒಟ್ಟಾದ ಹಣವನ್ನೆಲ್ಲಾ ಒಂದುಗೂಡಿಸಿಕೊಂಡು ದೇವಪ್ಪನ ಅಂಗಡಿ ಬಳಿ ಬಂದ. ಸುಟ್ಟು ಕರಕಲಾದ ಅಂಗಡಿ ಬಳಿ ಆತ ಬೇಸರದಿಂದಲೇ ಬೂದಿ- ಕಸವನ್ನು ಗುಡಿಸುತ್ತಿದ್ದ. 'ನಮಸ್ಕಾರ ದೇವಪ್ಪಣ್ಣಾ...' ಎಂದದ್ದಕ್ಕೆ ಪ್ರತಿಯಾಗಿ ಅವನು ನಮಸ್ಕರಿಸಿದ. ಜನ್ನತ್ ತಾನು ಒಟ್ಟು ಮಾಡಿದ್ದ ಹಣವನ್ನು ಅವನ ಕೈಗಿರಿಸಿದ. ಉಮ್ಮಳಿಸುವ ದುಃಖದೊಂದಿಗೆ ದೇವಪ್ಪ ಜನ್ನತ್‌ನನ್ನು ಆಲಂಗಿಸಿದ. 'ಇದು ನನ್ನದಲ್ಲ, ಇಲ್ಲಿ ಸೇದಿ ಹೋದವರ ಋಣ. ಅವರು ಕ್ಷಣ ಮಾತ್ರಕ್ಕಾದರೂ ಖುಷಿ ಪಟ್ಟಿದ್ದರೆ ಅದರ ಒಂದು ಭಾಗವಿದಷ್ಟೇ' ಎಂದು ಹೇಳಿದ. ಅಷ್ಟರಲ್ಲೇ ಹಿಂದಿನಿಂದ ಹೆಣ್ಣು ಧ್ವನಿಯೊಂದು ಕೇಳಿ ಬಂತು. ತೋಳಿನಿಂದ ಕೈ ಸಡಿಲಿಸಿ ಪರಿಚಿತ ಧ್ವನಿಯೆಂದು ಭಾವಿಸಿ ಜನ್ನತ್ ಹಿಂತಿರುಗಿದ. ಅದೇ ಒಂಟಿ ಬುರ್ಖಾಧಾರಿ ಮಹಿಳೆ ಹಿಂಬದಿಯಲ್ಲಿ ನಿಂತಿದ್ದಾಳೆ. ಕೈಯಲ್ಲಿ ಒಂದು ಸಣ್ಣ ಕಟ್ಟು. ಅವಳು ಹತ್ತಿರ ಬಂದವಳೇ 'ದೇವಪ್ಪಾ... ನಾನು ಸುಮಾರು ಸಲ ಬೀಡಿ ಸೇದಿದ್ದೇನೆ. ಹಣ ಕೊಡದ್ದು ಲೆಕ್ಕ ನನಗಾಗಲೀ ನಿನಗಾಗಲಿ ಗೊತ್ತಿರಲಿಕ್ಕಿಲ್ಲ. ಇಷ್ಟು ನಾನು ಕೂಡಿಟ್ಟ ಚಿಲ್ಲರೆ ಹಣ. ಕಷ್ಟ ಕಾಲದಲ್ಲಿ ನಿನಗೆ ಸಹಾಯಕ್ಕಾಗಲಿ' ಎಂದು ಹೇಳಿ ಅವನ ಕೈಗಿತ್ತು ಉತ್ತರಕ್ಕೂ ಕಾಯದೆ ಖಾಲಿ ಪಾದದಲ್ಲಿ ಅವಳು ಮುಂದುವರಿದಳು.

ಆ ಕ್ಷಣಕ್ಕೆ ಜನ್ನತ್‌ಗೆ ಏನು ಹೊಳೆಯಿತೋ, ಅವಳನ್ನು ಹಿಂಬಾಲಿಸಿದ. ಅವಳ ವೇಗದ ನಡಿಗೆಗೆ ಸಮವಾಗಿ ನಡೆಯಲು ಜನ್ನತ್‌ಗೆ ಸಾಧ್ಯವಾಗಲಿಲ್ಲ. ಆದರೂ ಅವಳ ಹಿಂದೆಯೇ ನಡೆಯುತ್ತಾ ಸಾಗಿದ. ಅವಳು ಕಡಲ ತಡಿಯ ತಿರುವಿಗೆ ತಲುಪುತ್ತಿದ್ದಂತೆ ಹಿಂತಿರುಗಿ ಜನ್ನತ್ ನನ್ನು ನೋಡಿ ಗಹಗಹಿಸಿ ನಕ್ಕಳು. ಜನ್ನತ್‌ಗೆ ಭಯವಾಯಿತು. ಆದರೂ ತೋರಗೊಡದೆ ಅವಳ ಹತ್ತಿರವಾದನು. ಅವಳು ಮತ್ತೊಮ್ಮೆ ವಿಕಟವಾಗಿ ನಗುತ್ತಾ 'ಸಿಗರೇಟು ಉಂಟಾ?' ಎಂದು ಕೇಳಿದಳು. ಜನ್ನತ್ ತನ್ನ ಪಾಕೆಟ್‌ಗೆ ಕೈ ಹಾಕಿ ಸಿಗರೇಟೊಂದನ್ನು ಎತ್ತಿ ಹಚ್ಚಿ ಕೊಟ್ಟ. ಅವಳು ಅಲ್ಲೇ ಇದ್ದ ಕಟ್ಟೆಯ ಮೇಲೆ ಕುಳಿತು ಸೇದತೊಡಗಿದಳು. 'ನೋಡು, ನನಗೆ ಆರೋಗ್ಯವಿದ್ದಾಗ ನನ್ನ ಹಿಂದೆ ಬರಲು ಸಾಕಷ್ಟು ಜನರಿದ್ದರು. ಈ ಇಳಿ ವಯಸ್ಸಿಗೆ ನನ್ನನ್ನು ಹಿಂಬಾಲಿಸುತ್ತೀಯೆಂದರೆ ನೀನು ಯಾಕೆ ನನ್ನ ಮಗನಾಗಿರಬಾರದು. ನಾನು ದೇವರಲ್ಲಿ ಪ್ರಾರ್ಥಿಸಿದ್ದಿಷ್ಟೇ. ನನ್ನ ಕೊನೆಗಾಲದಲ್ಲಾದರೂ ನನ್ನ ಮಗನ ಮುಖವನ್ನು ತೋರಿಸೆಂದು, ಅವನು ಕರುಣಾಮಯಿ' ಅವಳು ಮತ್ತೆ ಗಹಗಹಿಸಿ ನಕ್ಕಳು.

ತಿರುಗಿಯೂ ನೋಡದೆ ಆ ಕಡಲ ತಡಿಯಲ್ಲಿ ನಡೆಯುತ್ತಾ ಚುಕ್ಕಿಯಾಗುತ್ತಿದ್ದಳು. ಆ ಸಂಜೆಯ ಕಡಲ ಅಲೆಗಳು ದಡವನ್ನು ಮಾತೃತ್ವದಿಂದ ತಬ್ಬುತ್ತಿದ್ದವು. ದಿನ ಪೂರ್ತಿ ಆಡಿ ಬಳಲಿ ಬಂದ ಮಗ ಸೂರ್ಯನನ್ನು ಕಡಲು ತನ್ನ ಮಡಿಲಿಗೆ ಕರೆಯುತ್ತಿದ್ದಳು. ಅವಳ ಮಾತು ಮತ್ತೊಮ್ಮೆ ಕಿವಿಯಲ್ಲಿ ರಿಂಗಣಿಸಿದಂತಾಗಿ ಜನ್ನತ್ ತನ್ನ ಜನನದ ಕಥೆ ನೆನಪಾಗಲೆಂದು ಸಿಗರೇಟು ಹಚ್ಚಿಕೊಂಡು ತುಟಿಗಿಟ್ಟ.

●